**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. 1385/2014**

| | | |
|---|---|---|
| ಹೆಸರು | ಸಿ.ಈ. ತಿಮ್ಮಯ್ಯ | ಪ್ರಾ.ಸಾ.6 |
| ತಂದೆ/ಗಂಡನ ಹೆಸರು | ಈರಪ್ಪ | ಚಾ.ಸಾ.12 |
| ವಯಸ್ಸು | 55 ವರ್ಷ | |
| ಕೆಲಸ | ಹೆಚ್ಚುವರಿ ಪೊಲೀಸ್ ಅಧೀಕ್ಷಕರು | ಸಾ.ಪ್ರ.ವ.ಬೋ |
| ವಾಸ | ಮಂಡ್ಯ | ದಿ:14.03.2023 |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ : –**

ನಾನು ಅಕ್ಟೋಬರ್ 2013 ರಿಂದ ಸಪ್ಟೆಂಬರ್ 2014ರವರೆಗೆ ನಂದಗುಡಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ: 15.02.2014 ರಂದು ಪ್ರಸ್ತುತ ಪ್ರಕರಣದ ಕಡತವನ್ನು ಚಾ.ಸಾ.11ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಅದೇ ದಿನ ಎಮ್.ವಿ.ಜೆ. ಆಸ್ಪತ್ರೆಗೆ ಭೇಟಿ ನೀಡಿ ಮೃತ ಬಡಗಿ ಲಕ್ಷ್ಮಯ್ಯರವರ ಶವ ಪಂಚನಾಮೆಯನ್ನು ಪಂಚರ ಸಮಕ್ಷಮ ಜರುಗಿಸಿ ಶವ ಪಂಚನಾಮೆಯನ್ನು ತಯಾರಿಸಿ ಪಂಚರ ಸಹಿ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾ.ಸಾ.3, 5ರವರ ಶವ ಪಂಚನಾಮೆಯ ಹೇಳಿಕೆ ಪಡೆದುಕೊಂಡಿರುತ್ತೇನೆ. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ.1 ತೋರಿಸಿದ ಸ್ಥಳದಲ್ಲಿ ಪಂಚರ ಸಮಕ್ಷಮ ಸಂಜೆ 3.30–4.30ರವರೆಗೆ ಪಂಚನಾಮೆ ಕ್ರಮ ಜರುಗಿಸಿ ಅಪಘಾತಕ್ಕೆ ಸಂಬಂಧಿಸಿದ ಕೆಎ–53–ಬಿ–2949 ವಾಹನದ ಮುರಿದಿದ್ದ ನಂಬರ್ ಪ್ಲೇಟ್ ಮತ್ತು ಸಿಟಿಕೆ–626 ಟಿವಿಎಸ್ ಮೋಟಾರ್ ವಾಹನವನ್ನು ಅಮಾನತ್ತು ಪಡಿಸಿಕೊಂಡು ಕಚ್ಚಾ ನಕ್ಷೆಯನ್ನು ತಯಾರಿಸಿ ಪಂಚರ ಸಹಿ ಪಡೆದುಕೊಂಡು ಪಂಚನಾಮೆಯನ್ನು ತಯಾರಿಸಿರುತ್ತೇನೆ.

ದಿ:19.02.2014 ರಂದು ಚಾ.ಸಾ.8 ಅಪಘಾತಕ್ಕೆ ಸಂಬಂಧಿಸಿದ ವಾಹನವನ್ನು ಪತ್ತೆ ಹಚ್ಚಿ ಹಾಜರುಪಡಿಸಿದ್ದು ಮಧ್ಯಾಹ್ನ 1.10–2.10ರವರೆಗೆ ಠಾಣಾ ಆವರಣದಲ್ಲಿ ಪಂಚರ ಸಮಕ್ಷಮ ಅಮಾನತ್ತುಪಂಚನಾಮೆಯನ್ನು ಜರುಗಿಸಿ ಸದರಿ ವಾಹನವನ್ನು ಅಮಾನತ್ತುಪಡಿಸಿಕೊಂಡು ಪಂಚರ ಸಹಿಗಳನ್ನು ಪಡೆದಿರುತ್ತೇನೆ. ಸದರಿ ವಾಹನವನ್ನು ಮಾಲುಪಟ್ಟಿಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ದಿ:21.02.2014 ರಂದು ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಹಾಜರಾಗಿದ್ದು, ವಿಚಾರಣೆ ನಡೆಸಿ ಕಲಂ.133ರಡಿಯಲ್ಲಿ ನೋಟಿಸ್ ನೀಡಿ ಪ್ರತ್ಯುತ್ತರ ಪಡೆದಿರುತ್ತೇನೆ. ಅದೇ ದಿನ ಇಂಡೆಮ್ನಿಟಿ ಬಾಂಡ್ ಪಡೆದು ಕೆಎ–53–ಬಿ–2949 ಕಾರನ್ನು ಬಿಡುಗಡೆಗೊಳಿಸಿರುತ್ತೇನೆ. ದಿ:02.07.2014ರಂದು ಐ.ಎಮ್.ವಿ. ವರದಿಯನ್ನು ಪಡೆದಿರುತ್ತೇನೆ. ನಂತರ ನನಗೆ ವರ್ಗಾವಣೆಯಾದ ಕಾರಣ ಪ್ರಕರಣದ ಕಡತವನ್ನು ಚಾ.ಸಾ.13ರವರಿಗೆ ಹಸ್ತಾಂತರಿಸಿರುತ್ತೇನೆ.

ಸಾಕ್ಷಿಯು ನಿ.ಪಿ.1 ಸ್ಥಳ ಪಂಚನಾಮೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ.1[ಡಿ] ಎಂದು, ನಿ.ಪಿ.4 ಶವ ತನಿಖಾ ವರದಿಯನ್ನು ನೋಡಿ ಗುರ್ತಿಸಿದ್ದು, ಅದರಲ್ಲಿರುವ

ಸಾಕ್ಷಿಯ ಸಹಿಯನ್ನು ನಿ.ಪಿ.4[ಸಿ] ಎಂದು, ಅಮಾನತ್ತು ಪಂಚನಾಮೆಯನ್ನು ನಿ.ಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.6[ಎ] ಎಂದು, ಕಚ್ಚಾನಕ್ಷೆಯನ್ನು ನಿ.ಪಿ.7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.7[ಎ] ಎಂದು, ಕಲಂ.133ರಡಿಯಲ್ಲಿ ನೀಡಿದ್ದ ನೋಟಿಸ್‌ನ್ನು ನಿ.ಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.8[ಎ] ಎಂದು, ಇಂಡೆಮ್ನಿಟಿ ಬಾಂಡ್‌ನ್ನು ನಿ.ಪಿ.9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.9[ಎ] ಎಂದು ಗುರ್ತಿಸಲಾಯಿತು. ಆರೋಪಿಯನ್ನು ನೋಡಿ ಗುರ್ತಿಸಿರುತ್ತಾರೆ.

**ಪಾಟಿ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**
**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**